**ದಿ:24.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ಪ್ರತಿವಾದಿಗಳ ಪರ ಶ್ರೀ. **K.M.B.,**ವಕೀಲರಿಂದ:-

ನಾನು ಈ ದಾವೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ನಂತರ ಸಲ್ಲಿಸಿರುತ್ತೇನೆ . ನಿಪಿ 21 ರಲ್ಲಿ ರೇವಣ್ಣ ಸಿದ್ದಪ್ಪ ರವರ ಜನ್ಮ ದಿನಾಂಕ 30.08.1948 ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಪ್ರತಿವಾದಿಗಳು ಯಾವ ದಾಖಲೆಗಳನ್ನು ಸಲ್ಲಿಸಿ, ಏನು ತಕಾರರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ . ನಿಪಿ 1 ಮತ್ತು 29 ರಲ್ಲಿರವ ಎಲ್ಲಾ ವಿಚಾರ ಸತ್ಯ ಇರುತ್ತದೆ . ನಮ್ಮ ತಂದೆಯವರು ಜೀವಂತ ಇದ್ದಾಗ ಆಗಲೀ , ನಾನಗಲೀ ಸದರಿ ನಿಪಿ 1 ಮತ್ತು ನಿಪಿ 29 ಅನ್ನ ಪ್ರಶ್ನಿಸಿ ಬೇರೆ ಯಾವುದೇ ನ್ಯಾಯಾಲಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಈರಪ್ಪ ಮಗ ಚನ್ನಬಸಪ್ಪನಿಗೆ ಎಂದು ಬರೆದಿದ್ದು ಅದನ್ನು ಕಾಟು ಮಾಡಿ ಶಿದ್ದಲಿಂಗಪ್ಪ ಮಗ ರೇವಣಸಿದ್ದಪ್ಪನಿಗೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಸದರಿ ಕಾಟು ಮಾಡಿ ಬರೆದಂತ ವ್ಯಕ್ತಿ ರೇವಣ್ಣ ಸಿದ್ದಪ್ಪ ರವರು ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಕಾಟು ಹಾಕಿದ ವಿಚಾರವನ್ನು ನಿಪಿ 1 ರಲ್ಲಿ ಕೊನೆ ಭಾಗದಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ಬೇರೆ ವ್ಯಕ್ತಿ ಎಂದು ಹೇಳುತ್ತಾರೆ . ನಾನು ಈ ದಾವೆಯಲ್ಲಿ ನಾನು ಪ್ರತಿವಾದಿ ನಂ.1 ರೇವಣ್ಣ ಸಿದ್ದಪ್ಪ ಯಾರು ಎಂಬುದು ನನಗೆ ಗೊತ್ತಿಲ್ಲ . ಸಾಕ್ಷಿ ಮುಂದುವರೆಸಿ ದಾನ ಪತ್ರವನ್ನು ಸುಶೀಲಮ್ಮ ಎಂಬ ಹೆಣ್ಣು ಮಗಳು ಸನ್ 2022 ರಲ್ಲಿ ಹಿಡಿದುಕೊಂಡು ನಮ್ಮ ಗ್ರಾಮಕ್ಕೆ ಬಂದಿರುತ್ತಾರೆ , ಸದರಿ ದಾನ ಪತ್ರದಲ್ಲಿ ಪ್ರತಿವಾದಿ 1 ರವರ ಹೆಸರು ಇರುತ್ತದೆ ಎಂದು ಹೇಳುತ್ತಾರೆ . ನಿಪಿ 1 ಕ್ರಯಪತ್ರದ ಆಧಾರದ ಮೇಲೆ ನಿಪಿ 11 ಮುಟೇಷನ್ ಆಗಿರುತ್ತದೆ ಎಂದರೆ ಸಾಕ್ಷಿ ಸೃಷ್ಠಿ ಮಾಡಿರುತ್ತಾರೆ ಎಂದು ಹೇಳುತ್ತಾರೆ . ನಿಪಿ 11 ಸೃಷ್ಠಿ ಮಾಡಿದ ದಾಖಲೆಯನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ದಾವಾ ಆಸ್ತಿ ಸಂಬಂದ ಇರುವುದಿಲ್ಲ ಎಂದು ಹೇಳುತ್ತಾರೆ . ನಮ್ಮ ತಂದೆಯ ಚನ್ನಬಸಪ್ಪ ರವರಿಗೆ ದಾವಾ ಆಸ್ತಿ ಹೆಸರಿಗೆ ಇರುವ ಬಗ್ಗೆ ಪತ್ರವನ್ನು ಹಾಜರುಪಡಿಸಲು ನಮ್ಮ ಬಳಿ ಇರುವುದಿಲ್ಲ . ನಮ್ಮ ಒಟ್ಟು ಕುಟುಂಬದ

ಆಸ್ತಿಯಲ್ಲಿ ನನ್ನ ತಮ್ಮನಾದ ಸಿದ್ದಪ್ಪರವರಿಗೆ 3 ಎಕರೆ , ತಂಗಿಯಾದ ಚಂದ್ರಮ್ಮರವರಿಗೆ 4 ಎಕರೆ ಮತ್ತು ನನಗೆ ದಾವಾ ಆಸ್ತಿಯನ್ನು ಬಿಟ್ಟು 4 ಎಕರೆ ವಿಭಾಗ ಆಗಿರುತ್ತದೆ . ನಮ್ಮ ತಂದೆಗೆ ಸಂಬಂದಿಸಿದ ಆಸ್ತಿಯನ್ನು ನಾವು ಸನ್ 1988-89 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಆಗಿರುವ ಕಾಲಕ್ಕೆ ದಾವಾ ಆಸ್ತಿಯ ಬಗ್ಗೆ ಯಾವುದೇ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಬಾಯಿ ಮಾತಿನಿಂದ ಹಂಚಿಕೊಂಡಿರುತ್ತೇವೆ ಎಂದು ಹೇಳುತ್ತಾರೆ . ಸಾಕ್ಷಿ ಮುಂದುವರಸಿ ಸದರಿ ಬಾಯಿ ಮಾತಿನಿಂದ ವಿಭಾಗ ಆದಾಗ ದಾವಾ ಆಸ್ತಿ ತನ್ನ ಪಾಲಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ . ನಾವು ವಿಭಾಗ ಮಾಡಿರುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂದಿಸಿದ ಯಾವುದೇ ದಾಖಲೆ ನೋಡದೆ ವಿಭಾಗ ಮಾಡಿಕೊಂಡಿರುತ್ತೇವೆ . ನಾವು ಬಾಯಿ ಮಾತಿನಿಂದ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳುವ ಹಾಗೆ ದಾವಾ ಆಸ್ತಿಯ ನನ್ನ ಪಾಲಿಗೆ ಬಂದ ಬಗ್ಗೆ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ . ಸನ್ 1988-89 ರಲ್ಲಿ ವಿಭಾಗ ಮಾಡಿಕೊಂಡಿರುವ ಆಸ್ತಿಗಳನ್ನು ಬಿಟ್ಟು ನಮ್ಮ ಕುಟುಂಬಕ್ಕೆ ಸಂಬಂದಿಸಿದ ಹಾಗೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಿಸುವ ಪೂರ್ವದಲ್ಲಿ ಬಿಳಿಚೋಡು ಪೋಲೀಸ್ ಠಾಣೆಯಲ್ಲಿ ನಮ್ಮ ಹೆಂಡತಿಯಾದ ಗಿರಿಜಮ್ಮ ರವರ ಹೆಸರಿಗೆ ದೂರನ್ನು ನೀಡಿದ್ದು , ಸದರಿ ದೂರಿಗೆ ಬಿಳಿಚೋಡು ಠಾಣೆಯವರು ನಿಪಿ 19 ರಂತೆ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ 19 ರಲ್ಲಿ ಪ್ರತಿವಾದಿ ರೇವಣ್ಣ ಸಿದ್ದಪ್ಪರವರು ನಮ್ಮ ಸಹೋದರ ಮಾವ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಪೋಲೀಸರು ತಪ್ಪಾಗಿ ಬರೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ . ಪ್ರತಿವಾದಿ ನಂ.1 ರೇವಣ್ಣ ಸಿದ್ದಪ್ಪ ರವರ ತಾಯಿಯ ಹೆಸರು ಬಸಮ್ಮ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬಸಮ್ಮ ರವರು ನಮ್ಮ ತಂದೆಯ ಸ್ವತಃ ತಂಗಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ರೇವಣ ಸಿದ್ದಪ್ಪರವರು ನಮ್ಮ ಊರಿನ ಪ್ರಾಥಮಿಕ ಶಾಲೆಯಲ್ಲಿ ನಮ್ಮ ಮನೆಯಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡಿರುತ್ತಾರೆ , ಅದಕ್ಕೆ ಸಂಬಂದಿಸಿದ ದಾಖಲೆ ನಮ್ಮ ಊರಿನ ಪ್ರಾಥಮಿಕ ಶಾಲೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರೇವಣ ಸಿದ್ದಪ್ಪ ರವರು ನಿಪಿ 1 ಕ್ರಯಪತ್ರದ ಆಧಾರದ ವೇಲೆ 2 ನೇ ಪ್ರತಿವಾದಿರವರಿಗೆ ಸನ್ 2022 ರಲ್ಲಿ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ದಾನ ಪತ್ರದ ಆಧಾರದ ಮೇಲೆ ಪ್ರತಿವಾದಿ 2 ರವರಿಗೆ

ಕಂದಾಯ ದಾಖಲೆ ವರ್ಗಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಸನ್ 2022 ರ ನಂತರ ಮಾಡಿಕುಂಡಿರುತ್ತಾರೆ ಎಂದು ಹೇಳುತ್ತಾರೆ . ಪ್ರತಿವಾದಿ 2 ರವರು ನಾನು ಹೇಳುವ ಹಾಗೆ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುವುದಿಲ್ಲ , ಅಧಿಕೃತವಾಗಿ ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ 9 ರಲ್ಲಿ ಕೊಟ್ರಪ್ಪ ಅವರ ಹೆಸರಿನಲ್ಲಿ ಇದ್ದ ಪಹಣಿಯು ರೇವಣ ಸಿದ್ದಪ್ಪ ರವರ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಿಪಿ 14 ಸನ್ 2001-2002 ರ ಪಹಣಿಯಲ್ಲಿ ಸಹ ರೇವಣ್ಣ ಸಿದ್ದಪ್ಪ ರವರ ಹೆಸರು ನಮೂದು ಇರುತ್ತದೆ ಎಂದರೆ ಸಾಕ್ಷಿ ನಮಗೆ ಸನ್ 2022 ರಲ್ಲಿ ತಿಳಿಯಿತು ಎಂದು ಹೇಳುತ್ತ-ರೆ . ನಿಪಿ 15 ಸನ್ 2021-22 ರಲ್ಲಿ ಪ್ರತಿವಾದಿ 2 ಸುಶೀಲಮ್ಮ ರವರ ಹೆಸರಿಗೆ ಪಹಣಿ ವರ್ಗಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಅವರು ನಮ್ಮ ಗ್ರಾಮಕ್ಕೆ ಸನ್ 2022 ರಲ್ಲಿ ಬಂದಾಗ ತಿಳಿಯಿತು ಎಂದು ಹೇಳುತ್ತಾರೆ . ನಮ್ಮ ತಂದೆಗೆ ಹೆಸರಿಗೆ ದಾವಾ ಆಸ್ತಿ ಇರುವ ದಾಖಲೆಗಳನ್ನು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ಪ್ರತಿವಾದಿಗಳ ಹೆಸರು ಮತ್ತು ಮೂಲದಾರರ ಹೆಸರು ನಮೂದು ಇರುತ್ತದೆ ನಮ್ಮ ತಂದೆಯ ಹಸೆರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇರುವಾಗ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅವರು ಕಂದಾಯ ಕಟ್ಟಿಕೊಂಡು ಬಂದಿರುತ್ತಾರೆ , ನಮ್ಮ ಬಳಿ ಇರುವುದಿಲ್ಲ ಎಂದು ಹೇಳುತ್ತಾರೆ . ನಮ್ಮತಂದೆಯವರು ವಿದ್ಯಾವಂತರು ಇರುವುದಿಲ್ಲ . ನಮ್ಮ ತಂದೆ ವಿದ್ಯಾವಂತರು ಇರುತ್ತಾರೆ, ಅವರಿಗೆ ವ್ಯವಹಾರಿಕ ಜ್ಞಾನ ಇರುತ್ತದೆ , ಅವರು ಹಲವಾರು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯವರಿಗೆ ಜ್ಞಾನ ಇರುವುದಿಲ್ಲ , ನಮ್ಮ ಅಜ್ಜಿ ಗೌರಮ್ಮರವರು ನನ್ನ ತಂಗಿ ಚಂದ್ರಮ್ಮರವರಿಗೆ ನೀಡಿದ ಆಸ್ತಿ ಮತ್ತು ನಮ್ಮ ತಮ್ಮನಿಗೆ ಆಸ್ತಿಯನ್ನು ಸಂಪಾದನೆ ಮಾಡಿರುತ್ತ-ರೆ ಎಂದು ಹೇಳುತ್ತಾರೆ . ನಮ್ಮ ತಂಗಿ ಚಂದ್ರಮ್ಮರವರಿಗೆ ಸರ್ವೆ ನಂಬರ್ 114 ಆಸ್ತಿ ನೀಡುವ ಪೂರ್ವದಲ್ಲಿ ನಮ್ಮ ತಂದೆ ಚನ್ನಬಸಪ್ಪ ರವರ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಆಸ್ತಿಯು ನಮ್ಮ ಅಜ್ಜಿ ನಮ್ಮ ತಂದೆ ಹೆಸರಿಗೆ ಖರೀದಿ ಮಾಡಿರುವ ಆಸ್ತಿ ಇರುತ್ತದೆ ಎಂದರೆ ಸರಿ. ಖರೀದಿ ಮಾಡಿದ ನಂತರ ನಮ್ಮ ತಂಗಿ ಚಂದ್ರಮ್ಮರವರಿಗೆ

ಹಂಚಿರುತ್ತಾರೆ ಎಂದರೆ ಸರಿ. ಒಂದು ವೇಳೆ ದಾವಾ ಆಸ್ತಿಯು ದಾವಾ ಆಸ್ತಿ ನಮ್ಮ ತಂದೆ ಖರೀದಿ ಮಾಡಿದ್ದಾದರೆ ಅವರ ಹೆಸರಿಗೆ ಖಾತೆ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರಿಗೆ ವ್ಯವಹಾರ ಜ್ಞಾನ ಇಲ್ಲದೇ ಮಾಡಿಸಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ . ದಾವಾ ಆಸ್ತಿಯನ್ನು ನಮ್ಮ ತಂದೆ ಖರೀದಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅಜ್ಜಿ ಗೌರಮ್ಮ ರವರು ನಮ್ಮ ತಂದೆ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿಯು ಪ್ರತಿವಾದಿ 2 ರವರ ಹೆಸರಿಗೆ ದಾನ ಮಾಡಿದ ಕಾರಣ ನಾನು ಈ ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಮತ್ತು ಪ್ರತಿವಾದಿ 1 ರವರು ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿಯಲ್ಲ. ನನಗಾಗಲೀ ನಮ್ಮ ತಂದೆಯಾಗಲೀ ದಾವಾ ಆಸ್ತಿ ಸಂಬಂದ ಇರುವುದಿಲ್ಲ , ನಾನು ವ್ಯಜ್ಯ ಕಾರಣ ಸೃಷ್ಠಿ ಮಾಡಿಕೊಂಡು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿ ಚೆಕ್ ಬಂದಿ ಪೂರ್ವಕ್ಕೆ ದಿದ್ದಿಗೆ ಗ್ರಾಮದ ಬಸವರಾಜಯ್ಯ , ಪಶ್ಚಿಮಕ್ಕೆ ದಿದ್ದಿಗಿ ಗ್ರಾಮದ ಮೌನಾಚಾರ್ಯ ಇರುತ್ತಾರೆ , ಉತ್ತರಕ್ಕೆ ದಿದ್ದಿಗೆ ಗ್ರಾಮದ ಪೂಜಾರ್ ಸಿದ್ದೇಶ್ , ದಕ್ಷಿಣಕ್ಕೆ ದಿದ್ದಿಗಿ ಗ್ರಾಮದ ಅನಗೋಡು ರೇವಣ ಸಿದ್ದಪ್ಪ ಇರುತ್ತಾರೆ . ಸದರಿ ಚೆಕ್ ಬಂದಿದಾರರ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ . ಸದರಿ ಚೆಕ್ ಬಂದಿಯಲ್ಲಿರುವ ಮಾಲೀಕರ ಪೂರ್ವ ಮಾಲೀಕರು ಯಾರೆಂಬುದು ನನಗೆ ಹೇಳಲು ಬರುವುದಿಲ್ಲ . ನಾನು ದಾವಾ ಆಸ್ತಿಯಲ್ಲಿ 67 ವರ್ಷದಿಂದ ಯಾವ ಬೆಳೆಗಳನ್ನು ಬೆಳೆದುಕೊಂಡು ಬಂದಿರುತ್ತಿರ ಎಂದರೆ ಸಾಕ್ಷಿ 2 ವರ್ಷದಿಂದ ಮೆಕ್ಕಜೋಳ ಬೆಳೆದಿರುತ್ತೇವೆ ಎಂದು . ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಇರುವ ಮೌನಾಚಾಯರ್ ರವರ ಜಮೀನು ದಿದ್ದಿಗಿ ಗ್ರಾಮಕ್ಕೆ ಸೇರಿರುತ್ತದೆ . ಉಳಿದ ದಿಕ್ಕಿನಲ್ಲಿರುವ ಜಮೀನುಗಳು ಉರುಲಕಟ್ಟೆ ಗ್ರಾಮಕ್ಕೇ ಸೇರಿರುತ್ತವೆ . ದಾವಾ ಆಸ್ತಿಯ ಉತ್ತರಕ್ಕೆ ಪೂಜಾರ್ ಸಿದ್ದೇಶ್ ರವರ ಕಳೆದ 15 ವರ್ಷದಿಂದ ಸ್ವಾಧೀನದಲ್ಲಿ ಇರುತ್ತಾರೆ . ಸದರಿ 15 ವರ್ಷದ ಹಿಂದೆ ದಾವಾ ಆಸ್ತಿ ಉತ್ತರಕ್ಕೆ ರೇವತಿ ಚೆನ್ನಬಸಪ್ಪ ಎಂಬುವವರು ಇರುತ್ತಾರೆ . ದಾವಾ ಆಸ್ತಿ ಪೂರ್ವಕ್ಕೆ ಬಸವರಾಜಯ್ಯ ರವರ ಮೊದಲಿಗೆ ಅವರ ತಂದೆ ಚಂದ್ರಶೇಖಯ್ಯ ಸ್ವಾಧೀನಲ್ಲಿ ಇದ್ದರು . ನಮ್ಮ ದಿದ್ದಿಗಿ ಗ್ರಾಮದಿಂದ ದಾವಾ ಆಸ್ತಿಯು 2 ಕಿ.ಮೀ ಅಂತರ ಇರಬಹುದು . ನಾನು ದಾವಾ ಆಸ್ತಿಯಲ್ಲಿ 67

ವರ್ಷದಿಂದ ಸಾಗುವಳಿ ಮಾಡುತ್ತಿರಲಿಲ್ಲ , ಪ್ರತಿವಾದಿಗಳೇ ನಿಪಿ 1 ರಂತೆ ಸ್ವಾಧೀನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರೇವಣ ಸಿದ್ದಪ್ಪ ರವರು ನಮಗೆ ಸಂಬಂದಿಕರು , ಅವರು ಪ್ರತಿವಾದಿ 2 ರವರಿಗೆ ದಾನ ಪತ್ರ ಬರೆದ ಕಾರಣ ನಾನು ದ್ವೇಷದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಪಿ 1 ಕ್ರಯಪತ್ರ ಆದ ನಂತರ ಬೇರೇಯವರಿಂದ ಸಾಗುವಳಿ ಮಾಡುತ್ತಿದ್ದು , ಪ್ರತಿವಾದಿ 1 ರವರು ನಿವೃತ್ತರಾದ ನಂತರ ಸ್ವತಃ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಹಿಂದಿನಿಂದಲೂ ದಾವಾ ಆಸ್ತಿ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 1 ಮೂಲ ಪ್ರತಿಯು ಒಂದು ಮನೆಯಲ್ಲಿ ಒಂದು ಟ್ರಂಕ್ ನಲ್ಲಿ ಇಟ್ಟಿದ್ದೇವು . ಅದು ಪ್ರತಿವಾದಿ 2 ರವರು ಸನ್ 2022 ರಲ್ಲಿ ನಮ್ಮ ಗ್ರಾಮಕ್ಕೆ ಬಂದು ವಿಚಾರಿಸಿದಾಗ ನಾವು ಹುಡುಕಿ ತಗೆದುಕೊಂಡಿರುತ್ತೇವೆ . ನನಗೆ ಪ್ರತಿವಾದಿ 2 ರವರು ಯಾವ ದಿನಾಂಕ ದಂದು ಬಂದಿದ್ದರು ವಿಚಾರಿಸಿದ್ದರು ಎಂದು ನಿಖರವಾಗಿ ಗೊತ್ತಿರುವುದಿಲ್ಲ . ಪ್ರತಿವಾದಿಗಳು ಮತ್ತು ನಮ್ಮ ನಡುವೆ ಹಲವಾರು ಕ್ರಿಮಿನಲ್ ಪ್ರಕರಣಗಳು ದಾವಾ ಆಸ್ತಿಯ ಸ್ವಾಧೀನದ ಬಗ್ಗೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿ 4 ಪ್ರಕರಣ ದಾಖಲಾಗಿರುತ್ತದೆ ಎಂದು ಹೇಳುತ್ತಾರೆ . ಪೋಲೀಸರು ದಾವಾ ಆಸ್ತಿ ದಾಖಲೆಗಳನ್ನು ಪರಿಶೀಲನೆ ಮಾಡಿ ನಮಗೆ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಮತ್ತು ಪ್ರತಿವಾದಿಗಳಿಗೆ ಪ್ರಕರಣ ಸಿವಿಲ್ ಸ್ವರೂಪ ಇರುತ್ತದೆ , ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಇಬ್ಬರಿಗೂ ತಿಳಿಸಿರುತ್ತ-ರೆ ಎಂದರೆ ಸರಿ. ಪ್ರತಿವಾದಿಗಳು ನಾನು ಅವರ ಸ್ವಾಧೀನಕ್ಕೆ ಅಡ್ಡಿ ಪಡಿಸಿರುತ್ತೇನೆ ಎಂದು ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ .

( ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ,ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು